# ‘ಸೈಯಾರಾ’ ಭಾವತಂತಿಗೆ ಕರಣ್ ಫಿದಾ

ಕರಣ್ ಜೋಹರ್ ತಮ್ಮ ಹಳೆಯ ಸಿನಿಮಾ ಬಗೆಗೆ ತಾವೇ ಆಗಾಗ ಒಂದು ಮಟ್ಟಿಗೆ ವಿಶ್ಲೇಷಣೆ ಮಾಡುತ್ತಿರುತ್ತಾರೆ. ಹಾಗೆಂದು, ಕೆಲವು ಬಾಲಿಶವಾದ ತಿರುಳನ್ನು ಅವರು ಸಮರ್ಥಿಸಿಕೊಳ್ಳುವುದನ್ನೇನೂ ಬಿಟ್ಟಿಲ್ಲ. ಪ್ರೇಮಕಥೆಗಳೇ ಗೆಲುವಿನ ಸೂತ್ರ ಎಂದು ಹಿಂದಿ ಚಿತ್ರರಂಗದಲ್ಲಿ ನಂಬಿದ ಅನೇಕರಿದ್ದಾರೆ. ಅಂಥವರ ಸಾಲಿನಲ್ಲಿ ಕರಣ್ ಜೋಹರ್ ನಿಲ್ಲುತ್ತಾರಾದರೂ, ಅವರು ‘ಕುಛ್ ಕುಛ್ ಹೋತಾ ಹೈ’, ‘ಕಭಿ ಖುಷಿ ಕಭಿ ಗಮ್’, ‘ಏ ದಿಲ್ ಹೈ ಮುಷ್ಕಿಲ್’ ತರಹದ ಸಿನಿಮಾಗಳಲ್ಲಿ ಕಟ್ಟಿಕೊಟ್ಟ ಪ್ರೇಮಕಥೆಗಳಿಗೆ ತಲೆಮಾರುಗಳ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ‘ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ’ ಅವರದ್ದೇ ನಿರ್ದೇಶನದ ಇತ್ತೀಚಿನ ಸಿನಿಮಾ. ಅದಕ್ಕೆ ಶ್ರೇಷ್ಠ ಜನಪ್ರಿಯ ಸಿನಿಮಾ ರಾಷ್ಟ್ರ ಪ್ರಶಸ್ತಿ ಕೂಡ ಸಂದಿದೆ.

‘ಕಾಫಿ ವಿತ್ ಕರಣ್’ ಶೋ ಮೂಲಕ ಸಿನಿಮಾ ತಾರೆಯರನ್ನು ಅನೌಪಚಾರಿಕ ಮಾತುಕತೆಗೆ ಎಳೆದ ಕರಣ್, ತಾವೇ ಸಂದರ್ಶನವೊಂದರಲ್ಲಿ ‘ಸೈಯಾರಾ’ ಹಿಂದಿ ಚಿತ್ರದ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

‘ಸೈಯಾರಾ ಸಿನಿಮಾ ನೋಡುತ್ತಾ ಹೋದಂತೆ ನನಗೆ ಮತ್ತೆ ಪ್ರೇಮಕಥೆಗಳನ್ನು ಯಾಕೆ ನಿರ್ದೇಶನ ಮಾಡಬೇಕು ಎಂಬ ಜ್ಞಾನೋದಯ ಆಯಿತು. ಇಂತಹ ಪ್ರೇಮಕಥಾ ಚಿತ್ರವನ್ನು ನಾನು ನಿರ್ದೇಶಿಸಲಿಲ್ಲವಲ್ಲ ಎಂದು ಅಸೂಯೆಯೂ ಆಯಿತು’ ಎಂದು ಕರಣ್ ಪ್ರತಿಕ್ರಿಯಿಸಿದ್ದಾರೆ.

ಮೋಹಿತ್ ಸೂರಿ ಅವರಿಗೆ ಹೊಸ ತಲೆಮಾರನ್ನು ಹಿಡಿದಿಟ್ಟುಕೊಳ್ಳುವ ಬಗೆ ಚೆನ್ನಾಗಿ ಗೊತ್ತಿದೆ. ಅವರು ಯಾವ ರೀತಿಯ ಭಾವುಕತೆಯನ್ನು ಬಯಸುತ್ತಾರೋ, ಅದನ್ನೇ ‘ಸೈಯಾರಾ’ ಚಿತ್ರದಲ್ಲಿ ಹೆಣೆದುಕೊಟ್ಟಿದ್ದಾರೆ ಎನ್ನುವುದು ಕರಣ್ ಶ್ಲಾಘನೆ.

ಹೊಸ ಮುಖಗಳಾದ ಅಹಾನ್ ಪಾಂಡೆ, ಅನೀತ್ ಪಡ್ಡಾ ಇಬ್ಬರನ್ನೂ ಪ್ರೇಮಕಥಾ ಪ್ರಿಯ ನಿರ್ದೇಶಕರು ಬಾಯಿ ತುಂಬಾ ಹೊಗಳಿದ್ದಾರೆ; ಅದೂ ಕಾವ್ಯಾತ್ಮಕವಾಗಿ: ‘ಅಹಾನ್ ಕಣ್ಣಿನಲ್ಲೇ ಅಭಿನಯಿಸಬಲ್ಲ ಚತುರ. ಮೊದಲ ಸಿನಿಮಾ ಎಂದು ಅನಿಸದೇ ಇರುವಷ್ಟು ಮಾಗಿದಂತೆ ಕಂಡನು. ಅನೀತ್ ಎಂತಹ ಚೆಲುವೆ? ಮೌನದಲ್ಲೂ ಭಾವತಂತು ಮೀಟಬಲ್ಲ ನಟನಾಸಾಮರ್ಥ್ಯ ಅವಳದ್ದು. ಈ ಇಬ್ಬರೂ ಸಾಕಷ್ಟು ಎತ್ತರಕ್ಕೆ ಬೆಳೆಯುವ ಲಕ್ಷಣವನ್ನು ಚೊಚ್ಚಲ ಚಿತ್ರದಲ್ಲೇ ತೋರಿದ್ದಾರೆ.’

ತಮ್ಮ 24ನೇ ವಯಸ್ಸಿನಲ್ಲಿಯೇ ಸ್ವತಂತ್ರ ನಿರ್ದೇಶಕರಾದ ಮೋಹಿತ್ ಸೂರಿ, ‘ಕಲ್‌ಯುಗ್’ ಸಿನಿಮಾದಲ್ಲಿ ಯಶಸ್ವಿ ಪ್ರೇಮಕಥೆಯನ್ನು ಉಣಬಡಿಸಿದ್ದರು. ‘ಮರ್ಡರ್ 2’ ಚಿತ್ರವು ಅವರ ಪಾಲಿಗೆ ಯಶಸ್ಸಿನ ಚಿಮ್ಮುಹಲಗೆ. ‘ಹಮಾರಿ ಅಧೂರಿ ಕಹಾನಿ’ ಸಿನಿಮಾ ಮೂಲಕ ಅವ್ಯಾಜ ಪ್ರೇಮವನ್ನು ನೋವಿನಲ್ಲಿ ಅದ್ದಿದಂತೆ ತೋರಿಸಿ ಮನ ಕಲಕಿದರು. ಈಗ ‘ಸೈಯಾರಾ’ ದೊಡ್ಡ ಗೆಲುವನ್ನು ಅವರಿಗೆ ನೀಡಿದೆ.

ಸೂಪರ್ ಸ್ಟಾರ್‌ಗಳ ಸಿನಿಮಾಗಳೇ ಏದುಸಿರುಬಿಡುತ್ತಿರುವ ಬಾಲಿವುಡ್ ಪಾಲಿಗೆ ಈ ಗೆಲುವು ಜೀವಾನಿಲವಾಗಿದೆ. ಅಲ್ಲದೆ, ಹೊಸಬರನ್ನು ಜನರು ಈಗಲೂ ಸ್ವೀಕರಿಸಲು ಸಿದ್ಧ ಎನ್ನುವುದನ್ನೂ ಸಾಬೀತುಪಡಿಸಿದೆ. ■



ಕರಣ್ ಜೋಹರ್



# ನರಸಿಂಹಾವತಾರ ಎಂಬ ಸೂಜಿಗಲ್ಲು

‘ಮಹಾವತಾರ್ ನರಸಿಂಹ’ ಅನಿಮೇಷನ್ ಚಿತ್ರವು ₹200 ಕೋಟಿ ಕಲೆಕ್ಷನ್ ಬಾಚಿಹಾಕಿದೆ. ಕನ್ನಡದ ‘ಕೆಜಿಎಫ್’, ‘ಕಾಂತಾರ’, ತೆಲುಗಿನ ‘ಸಲಾರ್’ ತರಹದ ದೊಡ್ಡ ಬಜೆಟ್‌ನ ಸಿನಿಮಾಗಳನ್ನು ನಿರ್ಮಿಸಿದ ಹೊಂಬಾಳೆ ಸಂಸ್ಥೆಯು ಈ ಸಿನಿಮಾ ಅರ್ಪಣೆ ಮಾಡಿದೆ. ಅಷ್ಟೇ ಅಲ್ಲದೆ, ಗಳಿಕೆಯ ಅಧಿಕೃತ ಮಾಹಿತಿಯನ್ನು ಆ ನಿರ್ಮಾಣ ಸಂಸ್ಥೆಯೇ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದೆ.

ವಿಷ್ಣುವಿನ ಅವತಾರಗಳನ್ನು ಇಟ್ಟುಕೊಂಡೇ ಆ್ಯನಿಮೇಟೆಡ್ ಸಿನಿಮಾ ಮಾಡುವ ದೊಡ್ಡ ಯೋಜನೆಯ ಮೊದಲ ಭಾಗದ ಸಿನಿಮಾ ಇದು. ನಿರ್ದೇಶಕ ಅಶ್ವಿನಿ ಕುಮಾರ್ ಅವರಿಗೆ ಇದು ಮೊದಲ ಚಿತ್ರವೂ ಹೌದು. ಅದರಲ್ಲೇ ಅವರು ದೊಡ್ಡಮಟ್ಟದ ಯಶಸ್ಸು ಸಾಧಿಸಿದ್ದಾರೆ.

ಶಿಲ್ಪಾ ಧವನ್, ಕುಶಾಲ್ ದೇಸಾಯಿ ಹಾಗೂ ಚೈತನ್ಯ ದೇಸಾಯಿ ಈ ಸಿನಿಮಾ ನಿರ್ಮಿಸಿದ್ದಾರೆ. ಹಿಂದಿ, ಕನ್ನಡ, ತೆಲುಗು, ತಮಿಳು ಹಾಗೂ ಮಲೆಯಾಳ ಭಾಷೆಗಳಲ್ಲಿ ಸಿನಿಮಾ ತೆರೆಕಂಡಿದೆ.

‘ಮಹಾವತಾರ್ ಸಿನಿಮಾ ಯೂನಿವರ್ಸ್’ ಸೃಷ್ಟಿಸಿ ಮುಂದಿನ ಹನ್ನೆರಡು ವರ್ಷಗಳಲ್ಲಿ ಸರಣಿ ಪೌರಾಣಿಕ ಸಿನಿಮಾಗಳನ್ನು ಆ್ಯನಿಮೇಟೆಡ್ ಸ್ವರೂಪದಲ್ಲಿ ತೋರಿಸುವುದು ನಿರ್ದೇಶಕ ಅಶ್ವಿನ್ ಆಲೋಚನೆ. ‘ಮಹಾವೀರ್ ಪರಶುರಾಮ’ ಚಿತ್ರವು ಇನ್ನೆರಡು ವರ್ಷಗಳಲ್ಲಿ ಸಿದ್ಧಗೊಳ್ಳಲಿದೆ. ಆನಂತರ ‘ಮಹಾವತಾರ್ ರಘುನಂದನ’, ‘ಮಹಾವತಾರ್ ದ್ವಾರಕಾಧೀಶ’, ‘ಮಹಾವತಾರ್ ಗೋಕುಲನಂದನ’ ಸಿನಿಮಾಗಳು ಬರಲಿವೆ. ಕೊನೆಯದಾಗಿ ಎರಡು ಭಾಗಗಳಲ್ಲಿ ‘ಮಹಾವತಾರ್ ಕಲ್ಕಿ’ ತೆರೆಕಾಣಲಿದೆ. ಅಂದುಕೊಂಡಂತೆ ಆದರೆ 2037ರವರೆಗೆ ‘ಮಹಾವತಾರ್ ಯೂನಿವರ್ಸ್’ ಸಿನಿಮಾಗಳು ಪ್ರೇಕ್ಷಕರಿಗೆ ಒಂದಾದಮೇಲೆ ಒಂದರಂತೆ ನೋಡಲು ಸಿಗಲಿವೆ.

ಹಾಲಿವುಡ್‌ನಲ್ಲಿ ದೊಡ್ಡ ದೊಡ್ಡ ಸ್ಟುಡಿಯೊಗಳು ಆ್ಯನಿಮೇಟೆಡ್ ಚಿತ್ರಗಳನ್ನು ಮಾಡಿ ದಶಕಗಟ್ಟಲೆ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿವೆ. ಅಲ್ಲಿನ ಕಥಾವಸ್ತುಗಳನ್ನೇ ನೋಡಿಕೊಂಡು ಇಲ್ಲಿನವರೂ ಸುಮ್ಮನಾಗಬೇಕಿಲ್ಲ. ಪುರಾಣದ ಕಥೆಗಳಲ್ಲಿ ನವರಸಗಳಿವೆ. ಅಸಂಖ್ಯ ಉಪಕಥೆಗಳಿವೆ. ಅವನ್ನೆಲ್ಲ ತಾಂತ್ರಿಕ ಶ್ರೀಮಂತಿಕೆಯೊಂದಿಗೆ ಆ್ಯನಿಮೇಟೆಡ್ ಸಿನಿಮಾ ಮೂಲಕ ತೋರಿಸಿದರೆ ಖಂಡಿತ ಜನರು ಸ್ವೀಕರಿಸಲಿದ್ದಾರೆ ಎನ್ನುವುದು ನಿರ್ದೇಶಕರ ನಂಬಿಕೆ. ■